# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 105 | Pages. 2 | Date: 27-03-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 105 - ಪುಟಗಳು : 2 | 27-03-2026 | ಶುಕ್ರವಾರ | Ph: 8762954248 | ದರ : ₹1



# ಪಿಡಿಒ ವಿರುದ್ಧ ಭ್ರಷ್ಟಾಚಾರ ಆರೋಪ

## ಕರವೇ ಕಾರ್ಯಕರ್ತರಿಂದ ಅನಿರ್ದಿಷ್ಟಾವಧಿ ಧರಣಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಬಾಗೆ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಚಿನ್ನಸ್ವಾಮಿ ವಿರುದ್ಧ ಕೇಳಿಬಂದಿರುವ ಭ್ರಷ್ಟಾಚಾರದ ಗಂಭೀರ ಆರೋಪಗಳ ಹಿನ್ನೆಲೆ, ಅವರನ್ನು ತಕ್ಷಣವೇ ಸೇವೆಯಿಂದ ಅಮಾನತ್ತುಗೊಳಿಸಿ ಪಾರದರ್ಶಕ ಹಾಗೂ ನ್ಯಾಯಸಮ್ಮತ ತನಿಖೆ ನಡೆಸಬೇಕೆಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ಸಕಲೇಶಪುರ ಘಟಕದ ಕಾರ್ಯಕರ್ತರು ಗುರುವಾರ ಬೆಳಗ್ಗಿನಿಂದಲೇ ತಾಲೂಕು ಪಂಚಾಯಿತಿ ಕಚೇರಿ ಮುಂಭಾಗ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

15ನೇ ಹಣಕಾಸು ಆಯೋಗದ ಅನುದಾನ, ವರ್ಗ-1 ಹಾಗೂ ವರ್ಗ-2 ಖಾತೆಗಳ ಹಣ ಮತ್ತು ರಾಷ್ಟ್ರೀಯ ಹೆದ್ದಾರಿ ಪರಿಹಾರಧನ ದುರ್ಬಳಕೆಗೊಂಡಿರುವ ಬಗ್ಗೆ ವ್ಯಾಪಕ ಆರೋಪಗಳು ಕೇಳಿಬಂದಿವೆ. ಈ ಸಂಬಂಧ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ 04-10-2025ರಂದು




ಇಲಾಖಾ ವಿಚಾರಣೆ ನಡೆಸುವಂತೆ ಆದೇಶ ನೀಡಿದ್ದರೂ ಇದುವರೆಗೆ ಯಾವುದೇ ಸ್ಪಷ್ಟ ಹಾಗೂ ಕಠಿಣ ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರಲ್ಲಿ ಅನುಮಾನಗಳಿಗೆ ಕಾರಣವಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಬೆಳಗ್ಗಿನಿಂದಲೇ ಧರಣಿ ಮುಂದುವರಿದಿದ್ದರೂ ಮಧ್ಯಾಹ್ನ 3 ಗಂಟೆಯವರೆಗೆ ಯಾವುದೇ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸದಿರುವುದು ಕಾರ್ಯಕರ್ತರ ಅಸಮಾಧಾನಕ್ಕೆ ಕಾರಣವಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ತಾಲೂಕು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಗಗನ್ ಹಾಡ್ಲಹಳ್ಳಿ, ಸಾರ್ವಜನಿಕ ಹಣ ದುರ್ಬಳಕೆಯಂತಹ ಗಂಭೀರ ಆರೋಪಗಳಿರುವಾಗ ಸಂಬಂಧಿತ ಅಧಿಕಾರಿಯನ್ನು ತಕ್ಷಣ ಅಮಾನತ್ತುಗೊಳಿಸಿ ಪಾರದರ್ಶಕ ತನಿಖೆ ನಡೆಸಬೇಕು. ಈಗಾಗಲೇ ಸುಮಾರು ಒಂದೂವರೆ ಕೋಟಿಗೂ ಹೆಚ್ಚು ಹಣ ದುರ್ಬಳಕೆಗೊಂಡಿರುವ ದಾಖಲೆಗಳು ನಮ್ಮ ಬಳಿ ಇವೆ. ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸ್ಥಳಕ್ಕೆ ಬಂದು ದಾಖಲೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಅದುವರೆಗೆ ನಮ್ಮ ಹೋರಾಟ ಮುಂದುವರಿಯುತ್ತದೆ,ಎಂದು ಎಚ್ಚರಿಸಿದರು.

ಹಾಸನ ಜಿಲ್ಲಾ ಕರ್ನಾಟಕ ರಕ್ಷಣಾ ವೇದಿಕೆ ಪ್ರಧಾನ ಕಾರ್ಯದರ್ಶಿ ರಘು ಪಾಳ್ಯ ಮಾತನಾಡಿ, ಆಡಿದಾಖಲೆ ಸಮೇತ ಆರೋಪಗಳಿದ್ದರೂ ಕ್ರಮ ಕೈಗೊಳ್ಳದಿರುವುದು ಖಂಡನೀಯ. ನಮ್ಮ ಪ್ರತಿಭಟನೆಗೆ ಸ್ಪಂದನೆ ಸಿಗದಿದ್ದರೆ ನಾಳೆಯಿಂದ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುತ್ತೇವೆ,ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಕರವೇ ಸಕಲೇಶಪುರ ತಾಲೂಕು ಘಟಕದ ಉಪಾಧ್ಯಕ್ಷ ಸುನಿಲ್, ಪ್ರಧಾನ ಕಾರ್ಯದರ್ಶಿ ಜೈಕುಮಾರ್, ರೈತ ಘಟಕದ ಅಧ್ಯಕ್ಷ ವಸಂತ್ ಬೊಮ್ಮನಕೆರೆ, ಬೆಳಗೋಡು ಹೋಬಳಿ ಅಧ್ಯಕ್ಷ ಮಂಜುನಾಥ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಮೇಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ನಾಳೆಯೂ ಮುಂದುವರಿಸಿ ಇನ್ನಷ್ಟು ತೀವ್ರಗೊಳಿಸುವುದಾಗಿ ಪ್ರತಿಭಟನಾಕಾರರು ತಿಳಿಸಿದ್ದಾರೆ.

## ಶ್ರೀರಾಮ ಸೇನೆಯಿಂದ ಮನವಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ:ನಗರದ ಕೆಆರ್ ಪುರಂ ಬಡಾವಣೆಯಲ್ಲಿರುವ ಗೊಮ್ಮಟಾದ್ರಿ ಹೋಟೆಲ್ ನಲ್ಲಿ ಮುಸ್ಲಿಂ ಮಹಿಳೆಗೆ ಆಹಾರ ಸೇವೆ ನಿರಾಕರಿಸಿ, ನಿಂದಿಸಲಾಗಿದೆ ಎನ್ನುವ ಆರೋಪ ಸತ್ಯಕ್ಕೆ ದೂರವಾಗಿದ್ದು ಹೋಟೆಲ್ ಮಾಲೀಕರಿಗೆ ರಕ್ಷಣೆ ಒದಗಿಸಬೇಕು ಎಂದು ಆಗ್ರಹಿಸಿ ಶ್ರೀರಾಮ ಸೇನೆ ಜಿಲ್ಲಾ ಘಟಕದ ಕಾರ್ಯಕರ್ತರು ಗುರುವಾರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಇದನ್ನೇ ಮುಂದಿಟ್ಟು ಎಸ್‌ಡಿಪಿಐ ಸಂಘಟನೆಯವರು ಪೊಲೀಸ್ ಠಾಣೆಯಲ್ಲಿ, ಹೋಟೆಲ್ ಮಾಲೀಕರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ ಎಫ್‌ಐಆರ್ ದಾಖಲು ಮಾಡಿಸಿದ್ದಾರೆ. ಎಸ್‌ಡಿಪಿಐ ನವರು ಹಿಂದೆ ಹಲವಾರು ಭಯೋತ್ಪಾದಕ ಸಂಘಟನೆಗಳ ಜೊತೆ ಕೈ ಜೋಡಿಸಿ, ಕೊಲೆ ಸುಲಿಗೆಯಲ್ಲಿ ಭಾಗಿಯಾಗಿರುವುದು ಜಗಜ್ಜಾಹೀರ ಆಗಿದೆ. ಈ ಬಗ್ಗೆ ಪರಿಶೀಲನೆ ಮಾಡದೆ ಪೊಲೀಸ್ ಅಧಿಕಾರಿಗಳು

ಕರ್ತವ್ಯ ದುರುಪಯೋಗ ಮಾಡಿದ್ದಾರೆ ಎಂದು ದೂರಿದರು. ಜಿಲ್ಲಾಡಳಿತ ಸತ್ಯಾಸತ್ಯತೆ ಪರಿಶೀಲಿಸಿ ಹೋಟೆಲ್ ಮಾಲೀಕರು ಹಾಗೂ ಸಿಬ್ಬಂದಿ ಸೂಕ್ತ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು. ಈ ವೇಳೆ ಸಂಘಟನೆ ಜಿಲ್ಲಾಧ್ಯಕ್ಷ ಧರ್ಮನಾಯಕ್, ಸಂಘಟನಾ ಕಾರ್ಯದರ್ಶಿ ಪುನೀತ್ ಕೆ.ಕೆ.ನಗರಾಧ್ಯಕ್ಷ ದರ್ಶನ್, ಪ್ರಧಾನ ಕಾರ್ಯದರ್ಶಿ ಮಹೇಶ್,ಅರಕಲಗೂಡು ತಾ.ಅಧ್ಯಕ್ಷ ಮಂಜು, ಉಪಾಧ್ಯಕ್ಷ ಪ್ರದೀಪ್, ಕಾನೂನು ಸಲಹೆಗಾರ ಸುರೇಶ್‌ಗೌಡ ಇದ್ದರು.

## ಮಾ.28 ರಿಂದ 2 ದಿನ ವಿಶೇಷ ಆರೋಗ್ಯ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆಧುನಿಕ ಜೀವನ ಶೈಲಿಯಿಂದ ಉಂಟಾಗುತ್ತಿರುವ ದೈಹಿಕ ಹಾಗೂ ಮಾನಸಿಕ ಸಮಸ್ಯೆಗಳಿಗೆ ಸಮಗ್ರ ಮತ್ತು ನೈಸರ್ಗಿಕ ಪರಿಹಾರ ಒದಗಿಸುವ ಉದ್ದೇಶದಿಂದ ಸ್ವಸ್ಥ ಇಂಟರ್ ನ್ಯಾಷನಲ್ ವತಿಯಿಂದ ನಗರದ ಹೊಯ್ಸಳ ನಗರದಲ್ಲಿರುವ ವೇದ ಭಾರತೀ ಸಭಾಂಗಣದಲ್ಲಿ ಉಚಿತ ಆರೋಗ್ಯ ಶಿಬಿರ ಆಯೋಜಿಸಲಾಗಿದೆ. ಯೋಗ, ಆಯುರ್ವೇದ, ಪ್ರಕೃತಿ ಚಿಕಿತ್ಸೆ , ಪಾರಂಪರಿಕ ವೈದ್ಯಕೀಯ ಪದ್ಧತಿಗಳು ಹಾಗೂ ಸಾಂಸ್ಕೃತಿಕ-ಆಧ್ಯಾತ್ಮಿಕ ಚಿಕಿತ್ಸಾ ವಿಧಾನಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುವ ಮೂಲಕ ಜನರಿಗೆ ಸಮಗ್ರ ಆರೋಗ್ಯ ಸೇವೆ ನೀಡುವುದು ಈ ಶಿಬಿರದ ಪ್ರಮುಖ ಉದ್ದೇಶ ಎಂದು ವೇದಭಾರತೀ ಸಂಯೋಜಕ ಹರಿಹರಪುರ ಶ್ರೀಧರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಜಿಲ್ಲೆಯ ಎಲ್ಲ ವರ್ಗದ ಜನ ಇದರ ಸದುಪಯೋಗ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಒತ್ತಡ ಭರಿತ ಜೀವನ, ಅಸಮತೋಲನ ಆಹಾರ ಪದ್ಧತಿ ಹಾಗೂ ವ್ಯಾಯಾಮದ ಕೊರತೆಯಿಂದಾಗಿ




ಜನರಲ್ಲಿ ವಿವಿಧ ಕಾಯಿಲೆ ಹೆಚ್ಚಾಗುತ್ತಿವೆ. ನೈಸರ್ಗಿಕ ಚಿಕಿತ್ಸಾ ವಿಧಾನಗಳತ್ತ ಜನರನ್ನು ಆಕರ್ಷಿಸುವುದು ಈ ಕಾರ್ಯಕ್ರಮದ ಮುಖ್ಯ ಗುರಿ ಎಂದರು.ಶಿಬಿರ ಮಾ.28 ರಂದು ಶನಿವಾರ ಬೆಳಿಗ್ಗೆ 10 ರಿಂದ ರಾತ್ರಿ 8 ರ ವರೆಗೆ, 29 ರಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆವರೆಗೆ ನಡೆಯಲಿದೆ.

ಎರಡೂ ದಿನ ತಜ್ಞ ವೈದ್ಯರು ಹಾಗೂ ಯೋಗ-ಆಯುರ್ವೇದ ಪರಿಣಿತರು ಭಾಗವಹಿಸಿ ಜನರಿಗೆ ನೇರ ಸಲಹೆ ಮತ್ತು ಚಿಕಿತ್ಸೆ ನೀಡಲಿದ್ದಾರೆ.

ಈ ಶಿಬಿರದಲ್ಲಿ ಭಾಗವಹಿಸುವವರಿಗೆ ಉಚಿತ ಆರೋಗ್ಯ ತಪಾಸಣೆ, ವೈಯಕ್ತಿಕ ಆಪ್ತ ಸಮಾಲೋಚನೆ, ಜೀವನಶೈಲಿ ಮಾರ್ಗದರ್ಶನ, ಆಹಾರ ಪದ್ಧತಿ ಸಲಹೆ ಸೇರಿ ಹಲವಾರು ಸೇವೆ ಲಭ್ಯವಿರುತ್ತವೆ. ವಿಶೇಷವಾಗಿ ಮಾನಸಿಕ ಒತ್ತಡ ನಿವಾರಣೆ, ನಿದ್ರಾ ಸಮಸ್ಯೆ, ದೇಹದ ದೌರ್ಬಲ್ಯ, ಜೀರ್ಣಕ್ರಿಯೆ ತೊಂದರೆಗಳಿಗೂ ಪರಿಹಾರ ಸೂಚಿಸಲಾಗುತ್ತದೆ.

ಶಿಬಿರದ ಪ್ರಮುಖ ಆಕರ್ಷಣೆಯಾಗಿ ಸಾಂಪ್ರದಾಯಿಕ ಕಣ್ಣಿನ ಔಷಧಿ ಚಿಕಿತ್ಸೆ ಒದಗಿಸಲಾಗುತ್ತಿದ್ದು, ದೃಷ್ಟಿದೋಷ, ಕಣ್ಣುನೋವು, ತಲೆನೋವು ಹಾಗೂ ಅರ್ಧ ತಲೆನೋವು ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಇದಲ್ಲದೆ ಮೂಗು ಮತ್ತು ಗಂಟಲು ಸಮಸ್ಯೆಗಳು, ಥೈರಾಯ್ಡ್ ಸಮಸ್ಯೆ, ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ಮುಟ್ಟಿನ ಅಸೌಕರ್ಯ, ಹೊಟ್ಟೆನೋವು ಹಾಗೂ ಗರ್ಭಕೋಶ ಸಂಬಂಧಿತ ಸಮಸ್ಯೆಗಳಿಗೆ ಸಹ ನೈಸರ್ಗಿಕ ಔಷಧಿಗಳ ಮೂಲಕ ಚಿಕಿತ್ಸೆ ನೀಡಲಾಗುತ್ತದೆ ಎಂದರು.

ಸ್ವಸ್ಥ ಅಂತಾರಾಷ್ಟ್ರೀಯ ವಾಸ್ಕ್ ಯೋಗ ಗುರೂಜಿ ಕೆ. ಉಮಾ ಮಹೇಶ್ವರ್ ಮಾತನಾಡಿ, ಈ ಚಿಕಿತ್ಸಾ ಸೇವೆಗೆ ಪ್ರತಿ ವ್ಯಕ್ತಿಗೆ 50 ರೂ. ಶುಲ್ಕ ನಿಗದಿಪಡಿಸಲಾಗಿದೆ. ಉಚಿತ ಆಪ್ತ ಸಮಾಲೋಚನೆ ಮತ್ತು ಆರೋಗ್ಯ ತಪಾಸಣೆ ವ್ಯವಸ್ಥೆ ಇರುವುದರಿಂದ ಸಾರ್ವಜನಿಕರಲ್ಲಿ ಹೆಚ್ಚಿನ ಆಸಕ್ತಿ ವ್ಯಕ್ತವಾಗಿದೆ. ಶಿಬಿರದಲ್ಲಿ ಭಾಗವಹಿಸಲು ಇಚ್ಛಿಸುವವರು ಮುಂಚಿತವಾಗಿ ಅನುಮತಿ ಪಡೆದುಕೊಳ್ಳಲು 99160-73504 ನಂಬರ್ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ 7892940096-9663572406 ಸಂಖ್ಯೆಗಳಿಗೂ ಕರೆ ಮಾಡಬಹುದು ಎಂದರು. ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದರ ಜೊತೆಗೆ, ಔಷಧಿ ಮೇಲಿನ ಅವಲಂಬನೆ ಕಡಿಮೆ ಮಾಡಿ ನೈಸರ್ಗಿಕ ಜೀವನ ಶೈಲಿಯತ್ತ ಜನರನ್ನು ಪ್ರೇರೇಪಿಸುವ ಮಹತ್ವದ ಪ್ರಯತ್ನವಾಗಿರುವ ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಆರೋಗ್ಯದ ಲಾಭ ಪಡೆಯುವಂತೆ ಮನವಿ ಮಾಡಿದರು.

## ಸಾವಿರ ಫಲಾನುಭವಿಗಳಿಗೆ ಮನೆ ನಿರ್ಮಾಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಯೋಗ್ಯ 1000 ಫಲಾನುಭವಿಗಳಿಗೆ ವಸತಿ ನಿರ್ಮಾಣ ಮಾಡಲು ಕ್ರಮವಹಿಸುವುದಾಗಿ ಪುರಸಭೆ ಆಡಳಿತಾಧಿಕಾರಿ ಜಗದೀಶ್ ಗಂಗಣ್ಣನವರ್ ತಿಳಿಸಿದರು.

ಇಂದು ಪುರಸಭೆಯ ಹೆಚ್.ಡಿ.ದೇವೇಗೌಡರ ಸಭಾಂಗಣದಲ್ಲಿ ಶಾಸಕ ಎಚ್.ಡಿ.ರೇವಣ್ಣ ಅವರ ಉಪಸ್ಥಿತಿಯಲ್ಲಿ ಆಯೋಜಿಸಲಾಗಿದ್ದ 2026-27 ನೇ ಸಾಲಿನ ಅಂದಾಜು ಆಯವ್ಯಯ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಭಕ್ತಿ ವರ್ಧನ ಕ್ಷೇತ್ರವೆಂದು ಇತಿಹಾಸ ಪ್ರಸಿದ್ಧವಾದ ಪವಿತ್ರ ಹೇಮಾವತಿ ನದಿ ತೀರದಲ್ಲಿ ನೆಲೆಸಿರುವ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ಸನ್ನಿಧಿಗೆ ಸಾವಿರಾರು ಜನ ಭಕ್ತಾದಿಗಳು ಬರುತ್ತಿದ್ದು, ಪಟ್ಟಣದ ಸಮಸ್ತ ಸಾರ್ವಜನಿಕರ ಸಮಗ್ರ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು 2026-27ನೇ ಸಾಲಿನ ಬಜೆಟ್‌ನಲ್ಲಿ ಅಳವಡಿಸಲಾಗಿದೆ.

ಕುಡಿಯುವ ನೀರು, ಬೀದಿ ದೀಪ, ನೈರ್ಮಲ್ಯದ ವ್ಯವಸ್ಥೆ, ಉತ್ತಮ ವಾದ



ರಸ್ತೆ, ಚರಂಡಿಗಳಿಗೆ ಗರಿಷ್ಠ ಪ್ರಾಧಾನ್ಯತೆ ನೀಡಲಾಗುತ್ತದೆ.

ಎಚ್.ಡಿ.ದೇವೇಗೌಡರು, ಎಚ್.ಡಿ.ರೇವಣ್ಣ ಅವರು, ಸಂಸದ ಶ್ರೇಯಸ್ ಎಂ.ಪಟೇಲ್ ಅವರ ಮಾರ್ಗದರ್ಶನ ಮತ್ತು ಪರಿಶ್ರಮದಿಂದ ಹಲವಾರು ಯೋಜನೆ ಪ್ರಗತಿಯಲ್ಲಿವೆ.

ರಾಜ್ಯ ಹಣಕಾಸು ವಿಶೇಷ ಅನುದಾನದಡಿ 10 ಕೋಟಿ ವೆಚ್ಚದಲ್ಲಿ ಸುಸಜ್ಜಿತ ವಾಣಿಜ್ಯ ಮಳಿಗೆಗಳ ನಿರ್ವಹಣೆ, 4 ಕೋಟಿ ವೆಚ್ಚದಲ್ಲಿ ಎಲ್ಲಾ 23 ವಾರ್ಡ್‌ಗಳ ರಸ್ತೆ ಕಾಮಗಾರಿ ನಿರ್ವಹಣೆ. ಅಮೃತ್ ನಗರೋತ್ಥಾನ ಯೋಜನೆ. ಪುರಸಭೆ ನಿಧಿಯಿಂದ ಅನೇಕ ಅಭಿವೃದ್ಧಿ ಕಾಮಗಾರಿ, ಘನ ತ್ಯಾಜ್ಯ ವಸ್ತು ನಿರ್ವಹಣಾ ಘಟಕದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ, ಪಟ್ಟಣದಾದ್ಯಂತ ಕುಡಿಯುವ ನೀರಿನ ಪೈಪ್ ಲೈನ್ ಕಾಮಗಾರಿ.

ಇ-ಆಸ್ತಿ ಕಟ್ಟಡ ಪರವಾನಗಿಯನ್ನು ಯು.ಎಲ್.ಎಂ.ಎಸ್. ತಂತ್ರಜ್ಞಾನದ ಮೂಲಕ ನಿರ್ವಹಣೆ. ಜನನ ಮರಣ ನೋಂದಣಿಯನ್ನು ಇ-ಜನ್ಮ ತಂತ್ರಜ್ಞಾನದ ಮೂಲಕ ಉದ್ದಿಮೆ ಪರವಾನಗಿ ಗಣಕೀಕೃತಗೊಳಿಸಲಾಗಿದೆ ಎಂದರು.

ಸ್ವಚ್ಛ ಭಾರತ್ ಯೋಜನೆಯಡಿ ಬಯಲು ಶೌಚಾಲಯ ಮುಕ್ತ ಪ್ರದೇಶವನ್ನಾಗಿ 23 ವಾರ್ಡ್‌ಗಳನ್ನು ಘೋಷಿಸಿರುವುದರಿಂದ 2023-24 ನೇ ಸಾಲಿನಲ್ಲಿನ ಸ್ವಚ್ಛ ಭಾರತ್ ಮಿಷನ್ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಅವರಿಂದ ಪ್ರಮಾಣ ಪತ್ರ ಪಡೆಯಲಾಗಿದೆ.

2026-27ನೇ ಸಾಲಿನಲ್ಲಿ 23 ವಾರ್ಡ್‌ಗಳ ಅಭಿವೃದ್ಧಿಗೆ 10 ಕೋಟಿ, ಪಟ್ಟಣದ ಸಮಗ್ರ ಒಳ ಚರಂಡಿ ಯೋಜನೆಗಾಗಿ 12 ಕೋಟಿ 60 ಲಕ್ಷ, ಆಟದ ಮೈದಾನ/ ಬಯಲು ರಂಗ ಮಂದಿರದ ಉನ್ನತೀಕರಣಕ್ಕಾಗಿ 10 ಲಕ್ಷ, ಪುರಸಭೆ ವಾಣಿಜ್ಯ ಸಂಕೀರ್ಣದ ಉನ್ನತೀಕರಣಕ್ಕಾಗಿ 2 ಕೋಟಿ, ಆಶ್ರಯ ಯೋಜನೆಯಡಿ ಮೂಲ ಸೌಕರ್ಯ ಒದಗಿಸಲು 1 ಕೋಟಿ 15 ಲಕ್ಷ, ಸುಸಜ್ಜಿತ ಮಾರುಕಟ್ಟೆಯ ಮುಂದುವರಿದ ಕಾಮಗಾರಿಗಾಗಿ 3 ಕೋಟಿ 64 ಲಕ್ಷ ವೆಚ್ಚ ಮಾಡಲು ನಿರ್ಧರಿಸಲಾಗಿದೆ. ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆಯಡಿ 24 ಲಕ್ಷ ರೂ.ಗಳನ್ನು ಅನುದಾನದ ರೂಪದಲ್ಲಿ ನಿರೀಕ್ಷೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಅಂತಿಮವಾಗಿ ಪ್ರಾರಂಭಿಕ ಶಿಲ್ಕು 27,89,484 ರೂ.ಸೇರಿಸಿ ಕೊಂಡು, ಒಟ್ಟು 3,05,77,84,484 ರೂ. ಆದಾಯ ನಿರೀಕ್ಷೆ ಮಾಡಲಾಗಿದೆ. 3,05,48,10.000 ರೂ.ವೆಚ್ಚ ನಿರೀಕ್ಷಿಸಿ 29,74,484. ರೂ.ನಿರೀಕ್ಷಿತ ಉಳಿತಾಯವನ್ನು 2026-27 ನೇ ಸಾಲಿನ ಆಯವ್ಯಯ ಹೊಂದಿದೆ ಎಂದು ಜಗದೀಶ್ ಗಂಗಣ್ಣನವರ್ ತಿಳಿಸಿದರು.

ಶಾಸಕ ರೇವಣ್ಣ, ಪುರಸಭೆ ಮುಖ್ಯಾಧಿಕಾರಿ ಯು.ಎನ್. ಶಿವಶಂಕರ್, ಅಧಿಕಾರಿಗಳಾದ ರಮೇಶ್, ಪಂಕಜ ಇದ್ದರು.

## ಪೌಷ್ಟಿಕ ಆಹಾರ ಪೂರಕ



ಹಾಸನ: ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಪೌಷ್ಟಿಕ ಆಹಾರ ಸೇವನೆ ಅತಿ ಅಗತ್ಯ ಎಂದು ವೈದ್ಯೆ ಡಾ. ಸೌಮ್ಯ ಮಣಿ ನುಡಿದರು.

ನಗರದ ವಿಜಯನಗರ ಬಡಾವಣೆಯಲ್ಲಿರುವ ಟೈಮ್ಸ್ ಅಂತಾರಾಷ್ಟ್ರೀಯ ಶಾಲೆಯಲ್ಲಿ ನಡೆದ ಟೈಮ್ಸ್ ಕಿಂಡರ್ ಗಾರ್ಟನ್ ಗ್ರಾಜುಯೇಷನ್ ಡೇ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪೋಷಕರು ಡಯಟ್ ಹೆಸರಿನಲ್ಲಿ ಮಕ್ಕಳಿಗೂ ಕೂಡ ಸತ್ವಯುತ ಆಹಾರ ನೀಡದೆ ಅವರ ಬೆಳವಣಿಗೆ ಕುಂಠಿತಗೊಳಿಸಬೇಡಿ. ಉತ್ತಮ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಅವರ ಗ್ರಹಣ ಶಕ್ತಿಯನ್ನು ಹೆಚ್ಚಿಸುತ್ತದೆ. ಮಹಿಳೆಯರಲ್ಲಿ ಕಾಣಿಸಿಕೊಳ್ಳುವಂತಹ ಆರೋಗ್ಯ ಸಮಸ್ಯೆ ಬಗ್ಗೆ ಅತ್ಯಂತ ಮಹತ್ವದ ಮಾಹಿತಿ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಕೀಲ ರಾಜು ಕಶ್ಯಪ್ ಮಾತನಾಡಿ, ಮಕ್ಕಳನ್ನು ಮೊಬೈಲ್‌ನಿಂದ ದೂರವಿರಿಸಿ ಪೋಷಕರು ತಾವುಗಳು ಮೊಬೈಲ್‌ಗೆ ವಿರಾಮ ನೀಡಿ ಮಕ್ಕಳ ಜೊತೆ ಕಾಲ ಕಳೆಯಬೇಕು ಎಂದು ಹೇಳಿದರು.

ಟೈಮ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಬಿ.ಕೆ. ಟೈಮ್ಸ್ ಗಂಗಾಧರ್ ಮಾತನಾಡಿ, ವಿದ್ಯಾರ್ಥಿಗಳಿಗೆ ಬೇಕಾದ ಗುಣಮಟ್ಟದ ಹಾಗೂ ಮೌಲ್ಯಯುತ ಶಿಕ್ಷಣ ನೀಡುವಲ್ಲಿ ಟೈಮ್ಸ್ ಶ್ರಮಿಸುತ್ತಿದೆ.

ಈ ನಿಟ್ಟಿನಲ್ಲಿ ನಮ್ಮ ಪ್ರತಿಷ್ಠೆ ಅಂತಸ್ತನ್ನು ಬದಿಗಿಟ್ಟು ಪುಟ್ಟ ಮಕ್ಕಳನ್ನು ಹೊರಗೆ ಆಡಲು ಬಿಡಿ, ಅಜ್ಜ ಅಜ್ಜಿಯರ ಬಾಂಧವ್ಯದ ಮಡಿಲಲ್ಲಿ ಬೆಳೆಯಲು ಬಿಟ್ಟು ಅವರ ಅನುಭವದ ಒಡನಾಟ ಮಕ್ಕಳಲ್ಲಿ ಸಹ ಜೀವನ ಕಲಿಯುವಂತಾಗಲಿ. ಮಕ್ಕಳು ಚಿಕ್ಕವರಿರುವಾಗ ಹಳ್ಳಿಗಳಲ್ಲಿ ಬೆಳೆಯಲು ಅವಕಾಶ ಕಲ್ಪಿಸಿ ಪರಿಸರದೊಂದಿಗೆ ಬೆರೆತು ಮಕ್ಕಳು ಆಡಿ ಬೆಳೆದರೆ ಇನ್ನಷ್ಟು ಸದೃಢರಾಗುತ್ತಾರೆ ಎಂದರು.

## ಶಾಸಕರಿಗೆ ಧಿಕ್ಕಾರ ಕೂಗಿದರೆ ಹುಷಾರ್

ಅರಸೀಕೆರೆ: ಕ್ಷೇತ್ರದಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕೆಲಸ-ಕಾರ್ಯಗಳಿಗೆ ಸಂಬಂಧಿಸಿದಂತೆ ಸಲಹೆ ನೀಡಿ ತಪ್ಪಲ್ಲ, ಆದರೆ ಶಾಸಕರಿಗೆ ಸಣ್ಣ ಪುಟ್ಟ ಕಾರಣ ಮುಂದಿಟ್ಟು ಶಾಸಕರಿಗೆ ಧಿಕ್ಕಾರ ಕೂಗುವುದನ್ನು ಸಹಿಸುವುದಿಲ್ಲ ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್ ಎಚ್ಚರಿಕೆ ನೀಡಿದರು.

ಬುಧವಾರ ಸ್ಥಳಾಂತರಗೊಂಡಿರುವ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಮೂಲಭೂತ ಸೌಕರ್ಯ ಇಲ್ಲ ಎಂದು ಆರೋಪಿಸಿ ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ನೇತೃತ್ವದಲ್ಲಿ ನಡೆದ ಪ್ರತಿಭಟನೆ ಕುರಿತು ಪ್ರತಿಕ್ರಿಯಿಸಿ, ದೊಡ್ಡ ಪ್ರಮಾಣದ ಅಭಿವೃದ್ಧಿ ಕೆಲಸ-ಕಾರ್ಯ ಮಾಡಬೇಕಾದರೆ, ಸಣ್ಣ ಪುಟ್ಟ ಅಡೆತಡೆ, ತೊಂದರೆ ಎದುರಾಗುತ್ತವೆ.

ಇದನ್ನು ಅರಿಯದೆ, ಕೇವಲ ರಾಜಕೀಯ ದುರುದ್ದೇಶ ಇಟ್ಟುಕೊಂಡು ಶಾಸಕರ ವಿರುದ್ಧ ಪ್ರತಿಭಟನೆ ನಡೆಸುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ಹೈಟೆಕ್ ಬಸ್ ನಿಲ್ದಾಣ



ನಿರ್ಮಿಸಲು ಶಾಸಕರು 35 ಕೋಟಿ ಅನುದಾನ ತಂದು ಹಲವು ತಿಂಗಳೇ ಕಳೆದಿವೆ.

ಈ ಹಿನ್ನೆಲೆಯಲ್ಲಿ ಕಾಮಗಾರಿಗೆ ಕೈಗೆತ್ತಿಕೊಂಡಿದ್ದರಿಂದ ಬಸ್ ನಿಲ್ದಾಣವನ್ನು ಡಿಪೋ ಪಕ್ಕಕ್ಕೆ ತಾತ್ಕಾಲಿಕವಾಗಿ ಸ್ಥಳಾಂತರ ಮಾಡಲಾಗಿದೆ.

ಇದು ಹೊಸ ಬಸ್ ನಿಲ್ದಾಣ ಕಾಮಗಾರಿ ಮುಗಿಯುವವರೆಗೆ ಮಾತ್ರ. ಈಗ ಸ್ಥಳಾಂತರಗೊಂಡಿರುವ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ತೊಂದರೆ ಆಗದ ರೀತಿ ಅಗತ್ಯ ಕ್ರಮವನ್ನು ಈಗಾಗಲೇ ಕೈಗೊಳ್ಳಲಾಗಿದೆ. ಕುಡಿಯುವ ನೀರು, ಶೌಚಾಲಯ ನಿರ್ಮಾಣಗೊಂಡಿದ್ದು, ಮುಂದಿನ ಕೆಲವೇ ದಿನಗಳಲ್ಲಿ ಪ್ರಯಾಣಿಕರಿಗೆ ಪೂರಕವಾದ ತಂಗುದಾಣ, ಸಿಸಿ ಕ್ಯಾಮೆರಾ, ಅಳವಡಿಕೆ ಹೀಗೆ ಪ್ರಯಾಣಿಕರ ಬೇಕಾದ ಎಲ್ಲ ಅನುಕೂಲ ಕಲ್ಪಿಸಿಕೊಡುವಂತೆ ಈಗಾಗಲೇ ಶಾಸಕರು, ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಇಲಾಖೆ ಅಧಿಕಾರಿಗಳೂ ಸಹ, ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದಾರೆ.

ಈ ನಡುವೆ ಪ್ರತಿಭಟನೆ ನಡೆಸಿ ಶಾಸಕರ ವಿರುದ್ಧ ಧಿಕ್ಕಾರ ಕೂಗಿರುವುದು ಶೋಭೆ ತರುವ ವಿಷಯ ಅಲ್ಲ ಎಂದರು.

ಅಭಿವೃದ್ಧಿ ಕೆಲಸಗಳಿಗೆ ಸಲಹೆ, ಸಹಕಾರ, ಸೂಚನೆ ನೀಡಲಿ, ಅದನ್ನು ಬಿಟ್ಟು ಅಭಿವೃದ್ಧಿಗೆ ಅಡ್ಡಗಾಲು ಹಾಕುವ ಪ್ರಯತ್ನ ಮಾಡಿದರೆ, ಕ್ಷೇತ್ರದ ಜನ ಸಹಿಸುವುದಿಲ್ಲ ಎಂದು ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯ ಜಾಜೂರು ಸಿದ್ದೇಶ್, ಡಿಪೋ ಮ್ಯಾನೇಜರ್ ಕೃಷ್ಣಪ್ಪ, ಇಂಜಿನಿಯರ್ ಶ್ರೀಧರ್ ಸ್ವಾಮಿ ಇದ್ದರು.

## 4 ದಿನಗಳ ಎನಿಗ್ಮಾ ಕಾರ್ಯಕ್ರಮ ಆರಂಭ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ:ನಗರದ ಮಲೆನಾಡು ಇಂಜಿನಿಯರಿಂಗ್ ಕಾಲೇಜು ಟೆಕ್ನಿಕಲ್ ಕ್ಲಬ್ ವತಿಯಿಂದ ENIGMA &26 ಎಂಬ ನಾಲ್ಕು ದಿನಗಳ ಕಾರ್ಯಕ್ರಮ ಕಾಲೇಜಿನ ಅವರಣದಲ್ಲಿ ನಡೆಯಲಿದೆ.

ಈ ಹಿನ್ನೆಲೆ ಗುರುವಾರ ಬೆಳಿಗ್ಗೆ ಎನಿಗ್ಮಾ ENIGMA ಲೋಗೋ ಬಿಡುಗಡೆ ಮಾಡಲಾಯಿತು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಹಾಡು ನೃತ್ಯದ ನಂತರ ಎನಿಗ್ಮಾ ಲೋಗೋವನ್ನು ಮಲೆನಾಡು ಕಾಲೇಜು ಮುಂಭಾಗ ಉದ್ಘಾಟಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ಇಂದ್ರ ಬಹದ್ದೂರು, ಸಹ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ. ಶಿವಶಂಕರ್, ಕಾರ್ಯಕ್ರಮದ ಸಂಯೋಜಕ ಡಾ. ಮನು, ಸಂಸ್ಥೆಯ ಮಾಧ್ಯಮ ಸಂಯೋಜಕ ಕಟ್ಟಾಯ ಶಿವಕುಮಾರ್, ಮಲೆನಾಡು ಇಂಜಿನಿಯರಿಂಗ್ ಕಾಲೇಜಿನ ಮಲೆನಾಡು ಟೆಕ್ನಿಕಲ್ ಕ್ಲಬ್ ಅಧ್ಯಕ್ಷ ಎಲ್.ಆರ್. ಪ್ರಜ್ವಲ್ ಉಪಾಧ್ಯಕ್ಷರಾದ ಕೆ.ಎಸ್.ದೇಶಕ್ ಗೌಡ ಹಾಗೂ ಶ್ರೇಯಸ್ ಎಸ್,



ಖಜಾಂಚಿಗಳಾದ ಎಲ್.ಆರ್.ಪ್ರಜ್ವಲ್, ಪದಾಧಿಕಾರಿಗಳಾದ ಜಿ.ಎಸ್.ನೀತು, ಅಚ್ಚುತ್ ಶೇಖರ್, ಪಿ.ದಿನೇಶ್, ರಾಗಿಣಿ ಮಲ್ಲಿಕಾರ್ಜುನ್, ಸುಜಾತ್ ಶೆಟ್ಟಿ, ಅವಿನಾಶ್ ಹೊನ್ನಪ್ಪ, ಪಿ.ಧನುಷ್, ಎಚ್.ವಿ ಪ್ರಶಾಂತ್ ಹಾಗೂ ಸಮಿತಿಯ ಸದಸ್ಯರಿದ್ದರು. ಕಾಲೇಜಿನ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ಮಾ. 27 ರಂದು ಸಂಜೆ 5.30ಕ್ಕೆ ಟೆಕ್ ಸಂಧ್ಯಾ ಪೇಪರ್ ಉದ್ಘಾಟನೆ ನಡೆಯುವುದು, ಸಂಜೆ 6ಕ್ಕೆ ಲೇಜರ್ ಶೋ ನಡೆಯುವುದು.

28 ಮತ್ತು 29 ರಂದು ರಾಷ್ಟ್ರೀಯ ರೋಬೋಟಿಕ್ ಸ್ಪರ್ಧೆ ಎರಡು ದಿನಗಳ ಕಾಲ ನಡೆಯಲಿದೆ.

ಈ ಸ್ಪರ್ಧೆಯಲ್ಲಿ ಕರ್ನಾಟಕದ ಹಲವಾರು ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸುವುದರ ಜೊತೆಗೆ ಹೈದರಾಬಾದ್, ತಮಿಳು ನಾಡು, ಕೇರಳ ಒಳಗೊಂಡಂತೆ ಹಲವಾರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ.

ವಿಜೇತರಿಗೆ 1 ಲಕ್ಷ ಬಹುಮಾನ ನೀಡಲಾಗುತ್ತಿದೆ ಎಂದು ಮಲೆನಾಡು ಟೆಕ್ನಿಕಲ್ ಕ್ಲಬ್ ಅಧ್ಯಕ್ಷ ಎಲ್.ಆರ್.ಪ್ರಜ್ವಲ್, ಉಪಾಧ್ಯಕ್ಷ ಕೆ.ಎಸ್. ದೇಶಕ್ ಗೌಡ ತಿಳಿಸಿದರು.

ಈ ಕಾರ್ಯಕ್ರಮಗಳಿಗೆ ಸಮಿತಿ ಅಧ್ಯಕ್ಷ ಆರ್.ಟಿ ದ್ಯಾವೇಗೌಡ, ಪ್ರಧಾನ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್, ಖಜಾಂಚಿಗಳಾದ ಎಚ್.ಡಿ. ಪಾರ್ಶ್ವನಾಥ್, ಪ್ರಾಂಶುಪಾಲ ಡಾ.ಹೆಚ್.ಜೆ.ಅಮರೇಂದ್ರ, ಸೇರಿ ಸಮಿತಿಯ ಪದಾಧಿಕಾರಿಗಳು,ನಿರ್ದೇಶಕರು ಭಾಗವಹಿಸಲಿದ್ದಾರೆ.

# ಹಾನುಬಾಳು ಗ್ರಾ.ಪಂ. 7ನೇ ಬಾರಿಗೆ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಹಾನುಬಾಳು ಗ್ರಾಮ ಪಂಚಾಯಿತಿಯು ಅಭಿವೃದ್ಧಿ ಪಥದಲ್ಲಿ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದೆ.

ರಾಜ್ಯ ಸರ್ಕಾರ ನೀಡುವ ಪ್ರತಿಷ್ಠಿತ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಈ ಬಾರಿಯೂ ಪಂಚಾಯಿತಿ ಆಯ್ಕೆಯಾಗಿದ್ದು, ಪಂಚಾಯಿತಿಯ ಇತಿಹಾಸದಲ್ಲಿ ಏಳನೇ ಬಾರಿ ಲಭಿಸುತ್ತಿರುವ ಗಾಂಧಿ ಗ್ರಾಮ ಪ್ರಶಸ್ತಿ ಇದಾಗಿದೆ.

ಗ್ರಾಮೀಣ ಭಾಗದಲ್ಲಿ ಮಹಾತ್ಮ ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಉತ್ತಮ ಆಡಳಿತ, ಸ್ವಚ್ಛತೆ, ಕುಡಿಯುವ ನೀರು, ರಸ್ತೆ ಸಂಪರ್ಕ ಹಾಗೂ ತೆರಿಗೆ ವಸೂಲಾತಿಯಲ್ಲಿ ಅತ್ಯುತ್ತಮ ಸಾಧನೆ ತೋರುವ ಪಂಚಾಯಿತಿಗಳಿಗೆ ಸರ್ಕಾರ ಪ್ರಶಸ್ತಿ ನೀಡಿ ಗೌರವಿಸುತ್ತದೆ. ಹಾನುಬಾಳು ಪಂಚಾಯಿತಿಯು ಈ ಎಲ್ಲಾ ಮಾನದಂಡಗಳಲ್ಲಿ ಮುಂಚೂಣಿ ಕಾಯ್ದುಕೊಳ್ಳುವ ಮೂಲಕ ರಾಜ್ಯದ ಗಮನ ಸೆಳೆದಿದೆ.

**5 ಲಕ್ಷ ರೂ. ನಗದು-ಗೌರವ:**

ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ನೀಡುವ ಪ್ರಶಸ್ತಿಯು 5 ಲಕ್ಷ ರೂ. ಪ್ರೋತ್ಸಾಹಧನ, ಅಭಿನಂದನಾ ಪತ್ರ ಒಳಗೊಂಡಿದೆ. ಈ ಅನುದಾನವನ್ನು ಗ್ರಾಮದ ಮತ್ತಷ್ಟು ಅಭಿವೃದ್ಧಿ, ವಿಶೇಷವಾಗಿ ಕುಡಿಯುವ ನೀರು ಮತ್ತು ನೈರ್ಮಲ್ಯದಂತಹ ಯೋಜನೆಗಳಿಗೆ ಬಳಸಲು ಅವಕಾಶವಿರುತ್ತದೆ. ಕುಡಿಯುವ ನೀರಿನ ಸಮರ್ಪಕ ಪೂರೈಕೆ, ರಸ್ತೆ ಸಂಪರ್ಕ ಮತ್ತು ಬೀದಿ ದೀಪಗಳ ನಿರ್ವಹಣೆ, ಸರ್ಕಾರಿ ಯೋಜನೆಗಳ ಅನುಷ್ಠಾನ, ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಮಾನವ ದಿನಗಳ ಸೃಜನೆ ಮತ್ತು ವಸತಿ ಯೋಜನೆಗಳ ಪಾರದರ್ಶಕ ಜಾರಿ, ನಿಗದಿತ ಸಮಯಕ್ಕೆ ಗ್ರಾಮ ಸಭೆ ನಡೆಸುವುದು ಮತ್ತು ಸಾರ್ವಜನಿಕರ ದೂರುಗಳಿಗೆ ತಕ್ಷಣ ಸ್ಪಂದಿಸುವ ಮೂಲಕ ಪಂಚಾಯಿತಿಯು ಪ್ರಶಸ್ತಿಗೆ ಭಾಜನವಾಗಿದೆ.




> ಈ ಯಶಸ್ಸು ಕೇವಲ ಒಬ್ಬ ವ್ಯಕ್ತಿಯದ್ದಲ್ಲ. ಸಮೂಹ ಶ್ರಮದ ಫಲ. ಮೇಲಾಧಿಕಾರಿಗಳು, ಆಡಳಿತ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು ಹಾಗೂ ಕಚೇರಿಯ ಪ್ರತಿಯೊಬ್ಬ ಸಿಬ್ಬಂದಿ ಶ್ರಮದಿಂದ ಪ್ರಶಸ್ತಿಗೆ ಆಯ್ಕೆಯಾಗಿದೆ. ಪಂಚಾಯಿತಿಯ ಅಭಿವೃದ್ಧಿ ಕೆಲಸಗಳಲ್ಲಿ ಗ್ರಾಮಸ್ಥರ ಸಹಕಾರ ಹೆಚ್ಚಿದೆ.
>
> **– ಹರೀಶ್, ಪಿಡಿಒ**

**ಆಯ್ಕೆಗೆ ಇರುವ ಮಾನದಂಡ**

ಗಾಂಧಿ ಗ್ರಾಮ ಪ್ರಶಸ್ತಿಯು ಪಂಚಾಯಿತಿಯ ದಕ್ಷತೆಯ ಅಳತೆಗೋಲಾಗಿದೆ. ಸುಮಾರು 100ಕ್ಕೂ ಹೆಚ್ಚು ಅಂಶಗಳನ್ನು ಆಧರಿಸಿ ಪಂಚತಂತ್ರ, ತಂತ್ರಾಂಶದ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ.

ತೆರಿಗೆ ವಸೂಲಿ, ನೈರ್ಮಲ್ಯ ಮತ್ತು ಘನತ್ಯಾಜ್ಯ ನಿರ್ವಹಣೆ, ಗ್ರಾಮ ಪಂಚಾಯಿತಿಗಳಲ್ಲಿ ಪಾರದರ್ಶಕ ಆಡಳಿತವನ್ನು ಉತ್ತೇಜಿಸುವುದು ಮತ್ತು ಗ್ರಾಮಸ್ಥರಿಗೆ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ತಲುಪಿಸುವುದು ಪ್ರಶಸ್ತಿಯ ಉದ್ದೇಶವಾಗಿದೆ. ಪ್ರತಿವರ್ಷ ಗಾಂಧಿ ಜಯಂತಿಯ ಸಂದರ್ಭದಲ್ಲಿ ರಾಜ್ಯ ಸರ್ಕಾರವು ರಾಜ್ಯದ ಆಯ್ದ ಅತ್ಯುತ್ತಮ ಪಂಚಾಯಿತಿಗಳಿಗೆ ಈ ಗೌರವವನ್ನು ಪ್ರದಾನ ಮಾಡುತ್ತದೆ. ಹಾನುಬಾಳು ಪಂಚಾಯಿತಿಯು ಏಳು ಬಾರಿ ಈ ಪ್ರಶಸ್ತಿ ಪಡೆದಿರುವುದು ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ.

# ಏಪ್ರಿಲ್ 10ಕ್ಕೆ ಸಸ್ಪೆನ್ಸ್ ಡ್ರಾಮಾ ಪೀಟರ್ ತೆರೆಗೆ




ಸೆನ್ಸಿಟಿವ್ ಸಸ್ಪೆನ್ಸ್, ಡ್ರಾಮಾ ಕಥಾ ಹಂದರ ಒಳಗೊಂಡ ಚಿತ್ರ ಪೀಟರ್ ಬಿಡುಗಡೆಗೆ ಸಿದ್ಧವಾಗಿದ್ದು, ಏಪ್ರಿಲ್ 10ಕ್ಕೆ ರಾಜ್ಯಾದ್ಯಂತ ತೆರೆ ಕಾಣಲಿದೆ. ಕೇರಳದಲ್ಲಿ ಸುಮಾರು 300 ವರ್ಷಗಳಿಗೂ ಹೆಚ್ಚಿನ ಇತಿಹಾಸ ಹೊಂದಿರುವ ಚೆಂಡೆ ಮೇಳವನ್ನು ಪೀಟರ್ ಸಿನಿಮಾದಲ್ಲಿ ಕಟ್ಟಿಕೊಡಲಾಗುತ್ತಿದೆ. ಈ ಚಿತ್ರದ ಪ್ರತಿ ಹಾಡು ಒಂದೊಂದು ವಿಶೇಷತೆಗಳನ್ನು ಒಳಗೊಂಡಿದ್ದು, ಬಾಲಿವುಡ್ ಹೆಸರಾಂತ ಗಾಯಕ ಅಜಯ್ ಗೋಗವಾಲೆ ಅವರು ಈ ಚಿತ್ರದ ಹಾಡೊಂದಕ್ಕೆ ದನಿಯಾಗಿದ್ದಾರೆ.

ದೂರ ದರ್ಶನ ಖ್ಯಾತಿಯ ನಿರ್ದೇಶಕ ಸುಕೇಶ್ ಶೆಟ್ಟಿ ಅವರ ಸಾರಥ್ಯದ ಎರಡನೇ ಚಿತ್ರ ಪೀಟರ್ ವಿಶ್ವದಾದ್ಯಂತ ಬಿಡುಗಡೆಗೆ ಇದೀಗ ಡೇಟ್ ಫಿಕ್ಸ್ ಆಗಿದೆ. ಹೀಗೆ ಹಲವು ಸ್ಟಾರ್ ಸಿನೆಮಾದ ನಿರ್ಮಾಣ ಸಂಸ್ಥೆ ಪೀಟರ್ ಚಿತ್ರದ ವಿತರಣೆಯನ್ನು ಅದ್ದೂರಿಯಾಗಿ ಮಾಡಲಿದೆ.

ಟೈಟಲ್, ಹಾಡುಗಳ ಮೂಲಕವೇ ಸಿನಿ ರಸಿಕರಲ್ಲಿ ದೊಡ್ಡ ಕುತೂಹಲ ಹುಟ್ಟು ಹಾಕಿದ್ದ ಪೀಟರ್ ಚಿತ್ರವೀಗ ಪ್ರೇಕ್ಷಕರ ಮುಂದೆ ಬರಲು ಅಣಿಯಾಗಿದ್ದು ಚಿತ್ರತಂಡವೀಗ ಸಿನಿಮಾದ ರಿಲೀಸ್ ಡೇಟನ್ನು ಅನೌನ್ಸ್ ಮಾಡಿದೆ.

ಕನ್ನಡ ಚಿತ್ರರಂಗದ ಖ್ಯಾತ ಸೌಂಡ್ ಡಿಸೈನರ್ ರವಿ ಹೀರೆಮಠ ಹಾಗೂ ಸಾಫ್ಟ್‌ವೇರ್ ಇಂಜಿನಿಯರ್ ಆದ ರಾಕೇಶ್ ಹೆಗಡೆ, ವೃದ್ಧಿ ಸ್ಟುಡಿಯೋಸ್ ಬ್ಯಾನರ್‌ನಡಿ ಮೊದಲ ಬಾರಿಗೆ ನಿರ್ಮಿಸಿದ ಪೀಟರ್ ಚಿತ್ರವು ಅದ್ದೂರಿಯಾಗಿ ನಿರ್ಮಾಣವಾಗಿದೆ. ಈ ಚಿತ್ರದ ಪ್ರತಿ ಹಾಡು ಸಹ ತನ್ನದೇ ಆದ ವಿಶೇಷತೆ ಹೊಂದಿದೆ. ಇನ್ನೂ ಒಂದು ಹಾಡು ಬಾಕಿ ಇದ್ದು ಏಪ್ರಿಲ್ ಮೊದಲ ವಾರದಲ್ಲಿ ಪತ್ರಿಕಾಗೋಷ್ಠಿ ನೆಡೆಸಿ ಅಲ್ಲಿ ಬಿಡುಗಡೆ ಮಾಡುವ ಸಿದ್ಧತೆ ಆಗುತ್ತಿದೆ.

ಐದು ಭಾಷೆಯಲ್ಲಿ ಬಿಡುಗಡೆಯಾಗಿರುವ ಪೀಟರ್ ಚಿತ್ರದ ತಾಯೇ ತಾಯೇ ಹಾಡು ತಾಯಿ, ಮಗನ ನಡುವಿನ ಬಾಂಧವ್ಯದ ಕಥೆಯನ್ನು ಹೇಳುತ್ತದೆ. ಈ ಹಾಡಿಗೆ ಕನ್ನಡದಲ್ಲಿ ಸುಕೀರ್ತ್ ಶೆಟ್ಟಿ ಸಾಹಿತ್ಯ ಒದಗಿಸಿದ್ದು, ಮಲಯಾಳಂ ಹೊರತುಪಡಿಸಿ ಕನ್ನಡ, ಹಿಂದಿ, ತೆಲುಗು ಹಾಗೂ ತಮಿಳು ಭಾಷೆಯಲ್ಲಿ ರಿತ್ವಿಕ್ ಮುರುಳಿಧರ್ ಅವರು ಸಂಗೀತ ನಿರ್ದೇಶನ ಮಾಡುವುದರ ಜೊತೆಗೆ ಹಾಡಿಗೆ ತಾವೇ ಧ್ವನಿಯಾಗಿದ್ದಾರೆ. ಇದಲ್ಲದೆ ಬಾಲಿವುಡ್ ಹೆಸರಾಂತ ಗಾಯಕ ಅಜಯ್ ಗೋಗವಾಲೆ ಅವರು ಹಾಡಿರುವ ಹಾಡಿನ ವಿಡಿಯೋ ಕೂಡ ಬಿಡುಗಡೆಯಾಗಿ ಎಲ್ಲಾ ಕಡೆಗೂ ಸಹ ವೈರಲ್ ಆಗಿದೆ. ಪಕ್ಕಾ ಮಾಸ್ ಶೈಲಿಯಲ್ಲಿ ಮೂಡಿಬಂದಿರುವ ಈ ಹಾಡು ಸಂಗೀತ ಪ್ರಿಯರನ್ನು ಆಕರ್ಷಿಸುತ್ತಿದೆ, ಪ್ರತಿಷ್ಠಿತ ಇಷ್ವರ್ ಮ್ಯೂಸಿಕ್ ಹಿಂದಿ ಹಾಡಿನ ಹಕ್ಕುಗಳನ್ನು ತನ್ನದಾಗಿಸಿಕೊಂಡಿದೆ. ಮಲಯಾಳಂನಲ್ಲಿ ರಿಲೀಸ್ ಆಗಿರುವ ತಾಯೇ ತಾಯೇ ಹಾಡನ್ನು ತುಡುರಮ್ ಖ್ಯಾತಿಯ ಗಾಯಕ ಗೋಕುಲ್ ಗೋಪಕುಮಾರ್ ಅವರು ಹಾಡಿದ್ದಾರೆ. ಗೀತರಚನೆಕಾರ ಸಿಜು ತುರಾವೂರ್ ಸಾಹಿತ್ಯ ಬರೆದಿದ್ದಾರೆ.

ಪೀಟರ್ ಸಿನಿಮಾದಲ್ಲಿ ರಾಜೇಶ್ ಧ್ರುವ ಅವರು ನಾಯಕ ಪೀಟರ್‌ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಹೊಸ ಭರವಸೆ ಮೂಡಿಸೋ ಎಲ್ಲ ಲಕ್ಷಣ ಕಾಣಿಸ್ತಾ ಇದೆ. ಕನ್ನಡ ಸಿನೆಮಾ ಲೋಕಕ್ಕೆ ಹೊಸ ಪ್ರತಿಭೆ ಸಿಕ್ಕ ಹಾಗೇ ಭಾಸ ಆಗುತ್ತಿದೆ. ಇವರ ಜೊತೆ ರವೀಕ್ಷಾ ಶೆಟ್ಟಿ ಹಾಗೂ ಜಾನ್ವಿ ರಾಯಲ್ ಅವರುಗಳು ನಾಯಕಿಯರ ಪಾತ್ರವನ್ನು ನಿರ್ವಹಿಸಿದ್ದಾರೆ. ಪ್ರತಿಮಾ ನಾಯಕ್, ರಘು ಪಾಂಡೇಶ್ವರ್, ರಾಮ ನಾಡಗೌಡ, ವರುಣ್ ಪಟೇಲ್, ದೀನಾ ಪೂಜಾರಿ, ಭರತ್ ಉಳಿದ ತಾರಾ ಬಳಗದಲ್ಲಿದ್ದಾರೆ.

ಪೀಟರ್ ಚಿತ್ರವು ಒಂದು ಸೆನ್ಸಿಟಿವ್ ಸಸ್ಪೆನ್ಸ್ ಡ್ರಾಮಾ ಕಥಾಹಂದರ ಹೊಂದಿರೋ ಚಿತ್ರವಾಗಿದ್ದು, ಅದರಲ್ಲಿಯೂ ಮುಖ್ಯವಾಗಿ ಚೆಂಡೆ ಮೇಳದ ಕಂಟೆಂಟ್ ಚಿತ್ರದಲ್ಲಿದೆ. ಕೇರಳದಲ್ಲಿ 300 ವರ್ಷಗಳಿಗೂ ಅಧಿಕ ಕಾಲದ ಇತಿಹಾಸ ಹೊಂದಿರುವ ಚೆಂಡೆ ಮೇಳವನ್ನು ಪೀಟರ್ ಸಿನಿಮಾದಲ್ಲಿ ಕಟ್ಟಿಕೊಡಲಾಗುತ್ತಿದೆ. ಗುರುಪ್ರಸಾದ್ ನರ್ನಾಡ್ ಅವರ ಛಾಯಾಗ್ರಹಣ, ನವೀನ್ ಶೆಟ್ಟಿ ಅವರ ಸಂಕಲನ, ದೇವರಾಜ್ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

# ಬೆಂಬಲ ಬೆಲೆಯಡಿ ರಾಗಿ ಖರೀದಿ: ವ್ಯಾಪಕ ಅವ್ಯವಹಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಅರಸೀಕೆರೆ: ನ್ಯಾಪೆಡ್ ರಾಗಿ ಖರೀದಿ ಕೇಂದ್ರದಲ್ಲಿ ರೈತರಿಗಿಂತ ಮಧ್ಯವರ್ತಿಗಳು ಹಾಗೂ ಕಾಳ ಸಂತೆಕೋರರಿಗೆ ಲಾಭವಾಗುತ್ತಿದೆ ಎಂದು ದುಮ್ಮೇನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಅಜ್ಜಪ್ಪ ಹಾಗೂ ರೈತ ಮುಖಂಡ ಬ್ಯಾಡರಹಳ್ಳಿ ಜಯರಾಂ ಆಕ್ರೋಶ ವ್ಯಕ್ತಪಡಿಸಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಗಿ ಖರೀದಿ ಕೇಂದ್ರದಲ್ಲಿ ವ್ಯವಸ್ಥಿತವಾಗಿ ರೈತರಿಗೆ ಅನ್ಯಾಯವಾಗುತ್ತಿದ್ದರು. ಸ್ಥಳೀಯ ಶಾಸಕರಾಗಲಿ, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಾಗಲಿ ಗಮನ ಹರಿಸದೆ ಇರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ ಎಂದು ದೂರಿದರು.

ನ್ಯಾಪೆಡ್ ರಾಗಿ ಖರೀದಿ ಕೇಂದ್ರದಲ್ಲಿ ಇದೇ ಮೊದಲ ಬಾರಿಗೆ ಅವ್ಯವಹಾರ ನಡೆಯುತ್ತಿಲ್ಲ. 2023 ಹಾಗೂ 2025ರಲ್ಲೂ ಸಹ ಇಲ್ಲಿನ ನ್ಯಾಪೇಡ್ ಕೇಂದ್ರದಲ್ಲಿ ಖರೀದಿಸಿದ ರಾಗಿ ಮಣ್ಣು ಮಿಶ್ರಿತವಾಗಿದ್ದು ಸಾಬೀತಾಗಿ ನ್ಯಾಪೆಡ್ ಅಧಿಕಾರಿ ಒಬ್ಬರು ಅಮಾನತು ಆಗಿದ್ದರೆ ಮಧ್ಯವರ್ತಿ ಮೇಲೆ ಎರಡು ಬಾರಿ ಆರೋಪ ಕೇಳಿ ಬಂದಿವೆ. ಪ್ರಸ್ತುತ ಈ ಬಾರಿಯೂ ಸಹ ರಾಗಿ ಕೇಂದ್ರದಲ್ಲಿ ಅವ್ಯವಾರ ನಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿನ ನ್ಯಾಪೆಡ್ ಕೇಂದ್ರದ ಅಧಿಕಾರಿಗಳು ತಾಲೂಕಿನ ರೈತರು ತರುವ ರಾಗಿಯನ್ನು ತೆಗೆದುಕೊಳ್ಳುವುದಕ್ಕಿಂತ ಮಧ್ಯವರ್ತಿಗಳು ವರ ಊರು ಹಾಗೂ ವರ ಜಿಲ್ಲೆಗಳಿಂದ ತರುತ್ತಿರುವ ರಾಗಿಯನ್ನು ಆದ್ಯತೆ ಮೇರೆಗೆ ತೆಗೆದುಕೊಳ್ಳುತ್ತಿರುವುದರಿಂದ ತಾಲೂಕಿನ ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಾಲೂಕಿನ ತುಳೂರು ಗ್ರಾಮದಲ್ಲಿ ಮಧ್ಯವರ್ತಿಗೆ ಸೇರಿದ್ದು ಎನ್ನಲಾದ ಒಂದು ಲಾರಿ ಲೋಡ್ ರಾಗಿಯನ್ನು ಪೊಲೀಸರು ಸಿಸ್ ಮಾಡಿ 27 ಸಾವಿರ ರೂ. ದಂಡ ಕಟ್ಟಿಸಿಕೊಳ್ಳುವ ಮೂಲಕ ರಾಗಿ ತುಂಬಿದ ಲಾರಿಯನ್ನು ಬಿಟ್ಟಿದ್ದಾರೆ. ಈ ಲಾರಿ ಯಾರಿಗೆ ಸೇರಿದ್ದು ಅದರಲ್ಲಿದ್ದ ರಾಗಿ ಯಾರದ್ದು ಎಂಬ ಮಾಹಿತಿಯನ್ನು ಪೊಲೀಸ್ ಇಲಾಖೆ ನೀಡಬೇಕು ಎಂದು ತಾಕಿತು ಮಾಡಿದರು .

ಅದೇ ರೀತಿ ಕೃಷಿ ಇಲಾಖೆ ಅಧಿಕಾರಿಗಳು ತಾಲೂಕಿನಲ್ಲಿ ರೈತರು ಬೆಳೆದ ರಾಗಿ ಎಷ್ಟು ನ್ಯಾಪೆಡ್ ಕೇಂದ್ರಕ್ಕೆ ಎಷ್ಟು ರಾಗಿ ಬಂದಿದೆ ಎಂದು ಮಾಹಿತಿ ನೀಡಲಿ ಇಲ್ಲಿನ ರಾಗಿ ಕೇಂದ್ರದಲ್ಲಿ ನಡೆಯುತ್ತಿರುವ ಅವ್ಯವಹಾರ ಬೆಳಕಿಗೆ ಬರುತ್ತದೆ ಎಂದು ಸವಾಲು ಹಾಕಿದರು.

ರೈತ ಮುಖಂಡರಾದ ಮಾಲಿಂಗಪ್ಪ, ಪ್ರೀತಂ, ಕಾಂತರಾಜ್, ಗೋಪಾಲಪುರ ರಂಗಸ್ವಾಮಿ ಇದ್ದರು.

# ಹೋಟೆಲ್‌ನಲ್ಲಿ ವಿಡಿಯೋ ವಿವಾದ: ತನಿಖೆಗೆ ಆಗ್ರಹ



ಹಾಸನ: ನಗರದ ಗೊಮ್ಮಟಾದ್ರಿ ಹೋಟೆಲ್ ಆವರಣದಲ್ಲಿ ನಡೆದಿರುವ ವಿವಾದಾತ್ಮಕ ಘಟನೆಗೆ ಸಂಬಂಧಿಸಿದಂತೆ ನಿಷ್ಪಕ್ಷಪಾತ ಹಾಗೂ ಸಮಗ್ರ ತನಿಖೆ ನಡೆಸುವಂತೆ ಹಿಂದೂಪರ ಸಂಘಟನೆಗಳ ಸದಸ್ಯರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಈ ವೇಳೆ ಮಾತನಾಡಿದ ಸಂಘಟನೆ ಮುಖಂಡ ವೇಣುಗೋಪಾಲ್, ಇತ್ತೀಚೆಗೆ ಹೋಟೆಲ್‌ನಲ್ಲಿ ನಡೆದ ಘಟನೆಯೊಂದರ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಆ ವಿಡಿಯೋದಲ್ಲಿ ಹೋಟೆಲ್‌ಗೆ ಬಂದಿದ್ದ ಮಹಿಳೆಯೊಬ್ಬರೊಂದಿಗೆ ಸಿಬ್ಬಂದಿ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಉಲ್ಲೇಖಿಸಿ ಅಲ್ಪಸಂಖ್ಯಾತ ಸಮುದಾಯವನ್ನು ಗುರಿಯಾಗಿಸಿ ಮಾತನಾಡಿರುವುದು ಕಂಡು ಬರುತ್ತಿದೆ ಎಂದು ತಿಳಿಸಿದ್ದಾರೆ.

ಆದರೆ ಈ ಘಟನೆಗೆ ಸಂಬಂಧಿಸಿದಂತೆ ಸಾರ್ವಜನಿಕ ವಲಯದಲ್ಲಿ ವಿವಿಧ ರೀತಿಯ ಅನುಮಾನ ವ್ಯಕ್ತವಾಗುತ್ತಿದ್ದು, ಕೆಲವರ ಅಭಿಪ್ರಾಯದ ಪ್ರಕಾರ ಇದು ಪೂರ್ವನಿಯೋಜಿತವಾಗಿರಬಹುದೆಂಬ ಶಂಕೆಯೂ ಇದೆ. ಹಲವು ವರ್ಷಗಳಿಂದ ಉತ್ತಮ ಗುಣಮಟ್ಟದ ಹಾಗೂ ಸ್ವಚ್ಛ ಆಹಾರ ನೀಡುತ್ತಾ ಜನಮನ ಗೆದ್ದಿರುವ ಹೋಟೆಲ್‌ನ ಪ್ರತಿಷ್ಠೆ ಹಾಳು ಮಾಡಲು ಉದ್ದೇಶಪೂರ್ವಕವಾಗಿ ಈ ರೀತಿಯ ವಿಡಿಯೋ ಸೃಷ್ಟಿಸಿ ವೈರಲ್ ಮಾಡಿರುವ ಸಾಧ್ಯತೆಯನ್ನೂ ನಿರಾಕರಿಸುವಂತಿಲ್ಲ ಎಂದು ದೂರಿದರು.

## ಇತಿಹಾಸದಲ್ಲಿ ಈ ದಿನ

**ಮಾರ್ಚ್-27**

1794: ಅಮೇರಿಕಾದಲ್ಲಿ ಶಾಶ್ವತ ನೌಕಾಪಡೆ ಸ್ಥಾಪನೆಗೆ ಅನುಮೋದನೆ ದೊರೆಯಿತು.

1964: ಅಲಾಸ್ಕಾದಲ್ಲಿ ಭಾರೀ ಭೂಕಂಪ ಸಂಭವಿಸಿ ಸಾವಿರಾರು ಮಂದಿ ಬಾಧಿತರಾದರು.

1977: ಟೆನೆರಿಫೆ ವಿಮಾನ ಅಪಘಾತ ಸಂಭವಿಸಿ, ಇದು ವಿಶ್ವದ ಅತಿ ಭೀಕರ ವಿಮಾನ ದುರಂತಗಳಲ್ಲಿ ಒಂದಾಗಿ ದಾಖಲಾಗಿದೆ.

1998: ಗೂಗಲ್ ಸಂಸ್ಥೆಯ ಸ್ಥಾಪಕರು ಲ್ಯಾರಿ ಪೇಜ್ ಮತ್ತು ಸರ್ಗೇ ಬ್ರಿನ್ ಕಂಪನಿಯನ್ನು ಅಧಿಕೃತವಾಗಿ ನೋಂದಾಯಿಸಿದರು.

**ಜನನ**

1845: ವಿಲ್ಹೆಮ್ ರೋಂಟ್‌ಜೆನ್, ಎಕ್ಸ್-ಕಿರಣಗಳ ಆವಿಷ್ಕಾರಕ

1963: ಕ್ವೆಂಟಿನ್ ಟಾರಂಟಿನೋ, ಖ್ಯಾತ ಹಾಲಿವುಡ್ ನಿರ್ದೇಶಕ

**ನಿಧನ**

1968: ಯೂರಿ ಗಗಾರಿನ್, ಪ್ರಥಮ ಬಾಹ್ಯಾಕಾಶ ಯಾತ್ರಿಕ

# ಓದುಗರ ಆಸಕ್ತಿ ಕೆರಳಿಸುವ ನರ ವಾನರ ಕೃತಿ


**– ಪ್ರಸಾದ್ ರಕ್ಷಿದಿ**

ಇದು ವೈಜ್ಞಾನಿಕ ಕೃತಿ, ಕಾದಂಬರಿಯಲ್ಲ. ಆದರೆ ಲೇಖಕರು ಜೀವ ವಿಜ್ಞಾನದ, ಸಂಶೋಧನೆಗಳನ್ನು, ಜೊತೆಯಲ್ಲಿ ಅದರ ಹಲವಾರು ವಿಸ್ಮಯಕಾರಿ ಸಂಗತಿಗಳನ್ನು ಒಂದು ಆಕರ್ಷಕ ಕಥಾ ಹಂದರದ ಚೌಕಟ್ಟಿನಲ್ಲಿ ಕಟ್ಟಿಕೊಟ್ಟಿದ್ದಾರೆ. ಆದ್ದರಿಂದ ಈ ಪುಸ್ತಕವನ್ನು ಒಂದು ಕಾದಂಬರಿಯಂತೆಯೇ ಓದುತ್ತ ಹೋಗಬಹುದು.

ಡಚ್-ಅಮೇರಿಕನ್ ಜೀವ ವಿಜ್ಞಾನಿಗಳಾದ ಫ್ರಾನ್ಸ್ ಡಿ ವಾಲ್ ರ ಆಚಿಂಪಾಂಜಿ ಪಾಲಿಟಿಕ್ಸ್‌ಟಿ ಎಂಬ ಸಂಶೋಧನಾ ಕೃತಿ ಮತ್ತು ಬ್ರಿಟಿಷ್ ಜೀವ ವಿಜ್ಞಾನಿ ಜೇನ್ ಗುಡಾಲ್ ರ ಸಂಶೋಧನೆಗಳನ್ನು ಲೇಖಕರು ಈ ಕೃತಿಗೆ ಆಧಾರವಾಗಿ ಇಟ್ಟುಕೊಂಡಿದ್ದಾರೆ. ಹಾಗೆಯೇ ಇನ್ನೂ ಕೆಲವರು ಲೇಖಕರ ಸಂಶೋಧನಾ ಬರಹಗಳನ್ನು ಬಳಸಿಕೊಂಡಿರುವುದಾಗಿಯೂ ಅವರು ಉಲ್ಲೇಖ ಮಾಡಿದ್ದಾರೆ. ಆನರ ವಾನರಟಿ ಇವೆಲ್ಲವನ್ನೂ ಭಟ್ಟಿ ಇಳಿಸಿ ಹದ ಮಾಡಿದ ಸ್ಕಾಚ್ ಪಾನೀಯವನ್ನು ಗುಟುಕರಿಸಿದಂತೆ ನಮ್ಮನ್ನು ಓದಿಸಿಕೊಂಡು ಹೋಗುತ್ತದೆ.

ಹೆಸರೇ ಹೇಳುವಂತೆ ನರವಾನರ ಚಿಂಪಾಜಿಗಳ ಜೀವನ ವಿಧಾನದ ಅವಲೋಕನ ಮತ್ತು ಅಧ್ಯಯನದ ಅಪೂರ್ವ ಸಂಗತಿಗಳನ್ನು ತಿಳಿಸುವ ಕೃತಿ. ಜೀವ ವಿಕಾಸದಲ್ಲಿ ಚಿಂಪಾಂಜಿ ಮಾನವನಿಗೆ ಅತಿ ಹತ್ತಿರದ ಜೀವಿ ಎಂದು ನಾವೆಲ್ಲ ಓದಿದ್ದೇವೆ.

**(ಪ್ರದೀಪ್ ಕೆಂಜಿಗೆ ಅವರ ವೈಜ್ಞಾನಿಕ ಕೃತಿ)**




ಇಲ್ಲಿ ಚಿಂಪಾಜಿಗಳ ವರ್ತನೆ ಮತ್ತು ಜೀವನ ಪದ್ಧತಿ ಮಾತ್ರವಲ್ಲ ಇದರ ಜೊತೆಯಲ್ಲಿ ಮಾನವ ಸ್ವಭಾವಗಳು ಮತ್ತು ವರ್ತನೆಯಲ್ಲಿ ನಾವು ಕಾಣುವ ಏಕರೂಪತೆಗಳು. ನಾವು, ಮನುಷ್ಯ ಎನ್ನುವ ಬುದ್ಧಿವಂತ ಪ್ರಾಣಿಯಲ್ಲಿ ಮಾತ್ರ ಕಾಣಲು ಸಾಧ್ಯ ಎಂದು ನಂಬಿಕೊಂಡಿರುವ ಹಲವಾರು ಗುಣಗಳು ಚಿಂಪಾಜಿಯಂತಹ ವಾನರರಲ್ಲಿ ಅದರ ಮೂಲ ಸ್ವರೂಪದಲ್ಲಿ ಕಂಡುಬರುವುದು. ಅದರಲ್ಲೂ ಬಹಳ ಮುಖ್ಯವಾಗಿ ಮಾನವೇತಿಹಾಸದಲ್ಲೇ ಹಾಸು ಹೊಕ್ಕಾಗಿರುವ ಆರಾಜಕಾರಣಟಿ ಈ ವಾನರರ ಬದುಕಿನಲ್ಲೂ ವಿಸ್ಮಯಕಾರಿಯಾಗಿ ಹಾಗೂ ತುಂಬ ಪ್ರಭಾವ ಶಾಲಿಯಾಗಿ ಇರುವುದು. ಈ ಎಲ್ಲಾ ಕಾರಣಗಳಿಂದಲೇ ಈ ಅಧ್ಯಯನಗಳಿಗೆ ಬಹಳ ಮಹತ್ವವೂ ಬಂದಿರುವುದು.

ಇದರಿಂದಾಗಿಯೇ ಈ ಕೃತಿ ರಚನೆಗೆ ಕಾರಣವಾದ ಮೂಲ ಸಂಶೋಧನೆಗಳು ಹೇಗೋ, ಹಾಗೆಯೇ ಕೆಂಜಿಗೆಯವರ ಈ ಪುಸ್ತಕ ಕೂಡಾ ನಮಗೆ ಮುಖ್ಯವಾಗುತ್ತದೆ.

ಇಲ್ಲಿನ ವಿಚಾರಗಳು ಬಹಳ ಗಂಭೀರವಾದ ಸಂಗತಿಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಅಮೆರಿಕಾದ ಅಧ್ಯಕ್ಷರಾಗಿದ್ದ ರಿಚರ್ಡ್ ನಿಕ್ಸನ್ ರ ಕಾಲದ ವಾಟರ್ ಗೇಟ್ ಹಗರಣದ ಪ್ರಸಂಗವಿದೆ. ಆಗ ಅಮೆರಿಕಾದಲ್ಲಿ ಪ್ರಕಟವಾದ ಆಆಲ್ ದ ಪ್ರೆಸಿಡೆಂಟ್ಸ್ ಮೆನ್‌ಟಿ ಪುಸ್ತಕ ಮತ್ತು ಮಾಡಿದ ರಾಜಕೀಯ ಕೋಲಾಹಲ. ನಂತರ ರಾಜೀನಾಮೆ ಕೊಡಬೇಕಾದ ಅನಿವಾರ್ಯತೆಯ ಸಂದರ್ಭದಲ್ಲಿ ನಿಕ್ಸನ್‌ರ ವರ್ತನೆಯ ವಿವರಗಳಿವೆ. ಇದಕ್ಕೆ ಹೋಲಿಕೆಯಾಗುವಂತಹ ಘಟನೆ ಮತ್ತು ಅದೇ ರೀತಿಯ ವರ್ತನೆ ಚಿಂಪಾಜಿಗಳ ಬದುಕಿನಲ್ಲಿಯೂ ಇದೆ ಎನ್ನುವುದು ಸೋಜಿಗದ ಸಂಗತಿ ಇಲ್ಲಿದೆ.

1977ರಲ್ಲಿ ಭಾರತದಲ್ಲಿಯೂ ಇಂದಿರಾಗಾಂಧಿಯವರು ಊಹಿಸದಿದ್ದ ರೀತಿಯಲ್ಲಿ ಚುನಾವಣೆಯಲ್ಲಿ ಸೋತು ರಾಜೀನಾಮೆ ನೀಡಿದರು. ನಂತರ ಇಲ್ಲಿಯೂ ಆಆಲ್ ದ ಪ್ರೈಮ್ ಮಿನಿಸ್ಟರ್ಸ್ ಮೆನ್‌ಟಿ ಎನ್ನುವ ಪುಸ್ತಕವೂ ಬಂತು. ಆದರೆ ರಾಜೀನಾಮೆ ನೀಡುವ ಮೊದಲು ಖಾಸಗಿಯಾಗಿ ಇಂದಿರಾ ಗಾಂಧಿ ಅವರ ವರ್ತನೆ ಹೇಗಿತ್ತು ತಿಳಿಯದು. ಅದು ಎಲ್ಲಿಯೂ ದಾಖಲಾದಂತಿಲ್ಲ.

ನಾಯಕತ್ವಕ್ಕಾಗಿ ಮಾಡುವ ಹುನ್ನಾರಗಳು, ಹೋರಾಟಗಳು, ಚಿಂಪಾಜಿಗಳ ಮಹಾಯುದ್ಧ, ಸಾಮಾನ್ಯವಾಗಿ ಸ್ನೇಹಜೀವಿಗಳೆಂದು ಪರಿಗಣಿಸಲಾಗುವ ಚಿಂಪಾಂಜಿಗಳ ಕ್ರೌರ್ಯ ಎಲ್ಲವೂ ನಮ್ಮತ್ತ ಬೆಟ್ಟು ಮಾಡಿ ತೋರಿಸುವಂತೆ ಭಾಸವಾಗುತ್ತದೆ.

ಇಲ್ಲಿ ಮತ್ತೊಂದು ಸಂಗತಿಯನ್ನು ಹೇಳಬೇಕು. ಜೇನ್ ಗುಡಾಲ್ ತಮ್ಮ ಅಧ್ಯಯನದಲ್ಲಿ ಒಂದು ಕುತೂಹಲಕಾರಿಯಾದ ವಿಚಾರವನ್ನು ಹೇಳುತ್ತಾರೆ. ಅದು ಚಿಂಪಾಜಿ ಒಂದು ಕಡ್ಡಿಯನ್ನು ಉಪಕರಣದಂತೆ ಬಳಸಿದ ಪ್ರಸಂಗ. ಅದರೆ ಅದನ್ನುಅವರಿಗೆ ಆಗ ಚಿತ್ರೀಕರಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಉಪಕರಣಗಳನ್ನು ಬಳಸುವುದು ಮತ್ತು ಆ ಸಾಧ್ಯತೆಯಿಂದಲೇ ಮನುಷ್ಯ ಇಷ್ಟೊಂದು ವಿಕಾಸ ಹೊಂದಲು ಸಾಧ್ಯವಾಗಿರುವುದು ಎಂದು ನಾವೆಲ್ಲ ತಿಳಿದಿದ್ದೇವೆ. ಆ ಸಾಧ್ಯತೆಯ ಮೂಲ ಚಿಂಪಾಂಜಿಯಲ್ಲೂ ಇದೆ ಎನ್ನುವುದು ಗುಡಾಲ್‌ರ ಸಂಶೋಧನೆ.

ಇದಕ್ಕೆ ಹೋಲಿಸಬಹುದಾದ ಒಂದು ಘಟನೆಯನ್ನು ನಾವು ಕೆಲವರು ನೋಡಿದ್ದೇವೆ. ಅದು ಆನೆಗಳಲ್ಲಿ. ಮಲೆನಾಡಿನ ಕಾಫಿ ತೋಟಗಳಲ್ಲಿ ಆನೆಗಳ ಸಂಚಾರ ಹೆಚ್ಚಾದ ನಂತರ ಅನೇಕರು ವಿದ್ಯುತ್ ಬೇಲಿ ಮಾಡಿದರು. ಆನೆಗಳು ಸ್ವಲ್ಪ ಕಾಲ ಹೆದರಿ ಬೇಲಿಯಿಂದ ದೂರ ಉಳಿದವು. ಕೆಲಕಾಲದಲ್ಲೇ ಅವು ಒಂದು ಉಪಾಯವನ್ನು ಕಂಡುಕೊಂಡವು. ಅವು ಅಲ್ಲೇ ಹತ್ತಿರದಲ್ಲಿದ್ದ ಇರುತ್ತಿದ್ದ ಮರವನ್ನು ಬೇಲಿಯ ಮೇಲೆ ಬೀಳಿಸಿ ಬೇಲಿ ಮುರಿದು ಒಳಗೆ ಬರಲು ಕಲಿತವು. ಆಗ ಕೃಷಿಕರು ಬೇಲಿಯ ಹತ್ತಿರದ ಮರಗಳನ್ನು ಕಡಿದು ಅವುಗಳ ತಂತ್ರ ನಡೆಯದಂತೆ ಮಾಡಿದರು. ಆದರೆ ಆನೆಗಳು ಕೆಲವೇ ದಿನಗಳಲ್ಲಿ ಬೇರೆ ಕಡೆಯಿಂದ ಮರದ ದೊಡ್ಡ ಕೊಂಬೆಗಳನ್ನು ತಂದು ಬೇಲಿಯ ಮೇಲೆಸೆದು ಒಳಗೆ ಬಂದವು!

ಇದಕ್ಕಿಂತ ವಿಸ್ಮಯಕಾರಿ ಸಂಗತಿ, ಆನೆ ನಿಜವಾಗಿ ಒಂದು ಉಪಕರಣವನ್ನು ಬಳಸಿದ್ದು ಅಂದರೆ ಮರದಲ್ಲಿ ಇದ್ದ ಹಲಸಿನ ಕಾಯಿಯನ್ನು ಕೀಳಲು ನೀರಾವರಿ ಪೈಪನ್ನು ಬಳಸಿದ್ದು. ಎರಡು ವರ್ಷದ ಹಿಂದೆ. ಅದು ಸಕಲೇಶಪುರ ತಾಲ್ಲೂಕಿನ ತೋಟವೊಂದರಲ್ಲಿ ಹೆಣ್ಣಾನೆಯೊಂದು ಮರಿಯೊಂದಿಗೆ ಬಂದು, ಇಪ್ಪತ್ತು ಅಡಿ ಉದ್ದದ ಅಲ್ಯುಮಿನಿಯಂ ನೀರಾವರಿ ಪೈಪನ್ನು ಸೊಂಡಿಲಿನಲ್ಲಿ ಸುತ್ತಿ ಹಿಡಿದುಕೊಂಡು ಪೈಪಿನ ಒಂದು ತುದಿಯನ್ನು ನೆಲದಕ್ಕೆ ತಾಗಿಸಿಟ್ಟು ಇನ್ನೊಂದು ತುದಿಯನ್ನು ಓರೆಯಾಗಿ ಮರದತ್ತ ತಳ್ಳಿ ಹಲಸಿನ ಕಾಯಿಗೆ ಚುಚ್ಚಿ ಬೀಳಿಸಿ ತಿಂದದ್ದನ್ನು ನೋಡಿದ್ದೆವು. ಆಗಲೂ ಅಷ್ಟೇ ನಮಗೆ ಫೋಟೋ ತೆಗೆಯಲು ಸಾಧ್ಯವಾಗಿರಲಿಲ್ಲ. ಈ ವಿಚಾರವನ್ನು ಕೆಲವರು ಅರಣ್ಯ ಇಲಾಖೆಯವರಲ್ಲಿ ವಿಚಾರಿಸಿದೆವು. ಅವರೂ ಇಂತಹ ಘಟನೆಯನ್ನು ನಾವು ಇದುವರೆಗೆ ನೋಡಿಲ್ಲ ಎಂದರು.

ಈ ಕೃತಿಯನ್ನು ಓದುತ್ತ ಹೋದಂತೆ ಹಲವು ಪ್ರಶ್ನೆಗಳು ನಮ್ಮಲ್ಲೇ ಮೂಡುತ್ತ ಹೋಗುತ್ತವೆ.

ಎಲ್ಲಾ ಜೀವಿಗಳ ಬದುಕು, ವರ್ತನೆ, ಮುಂತಾದ ಸಂಗತಿಗಳನ್ನು ಪ್ರಕೃತಿ ಯಾವುದೋ ಒಂದು ರೀತಿಯಲ್ಲಿ ಸೂತ್ರೀಕರಿಸಿದಂತೆ ಇಟ್ಟಿದೆಯಲ್ಲ, ಆ ಶಕ್ತಿ ಯಾವುದು? ಬರಿಯ ವಂಶವಾಹಿಗಳಲ್ಲಿ ಮಾತ್ರ ಇದೆಯೆ?. ಅಥವಾ ನಿಜವಾಗಿ ಇಡೀ ವಿಶ್ವವೇ ಒಂದು ಸೂಪರ್ ಕಂಪ್ಯೂಟರ್ ನಂತೆ ಎಲ್ಲವನ್ನೂ ಸೂತ್ರೀಕರಿಸಿಕೊಂಡಿದೆಯೆ?

ಸೂಕ್ತ ವಾತಾವರಣ ದೊರತಾಗ ವರ್ಷಗಳ ನಂತರ ಮೊಳಕೆಯೊಡೆಯುವ ಚೈನಾದ ಬಿದಿರಿನಂತೆ, ನಮ್ಮಲ್ಲಿಯೂ ಇರುವ ಕೆಲವು ಸಸ್ಯಗಳ ಬೀಜಗಳಂತೆ, ಆ ಜೀವ ಶಕ್ತಿ ಉಳಿದು ಬರುವುದು ಹೇಗೆ?

ಅದು ಹೌದೆಂದಾದರೆ, ಸಾಂಪ್ರದಾಯಿಕವಾಗಿ ನಾವು ಪುರುಷ ಪ್ರಯತ್ನ ಎಂದು ಹೇಳುವ ಮಾನವ ಪ್ರಯತ್ನದ ಮಿತಿ ಏನು?

ನಾವು ಓದಿಕೊಂಡ ಕ್ವಾಂಟಮ್ ಫಿಸಿಕ್ಸ್ ಮತ್ತು ಕಲೆಕ್ಟಿವ್ ಕಾನ್ಸಿಯಸ್ ನೆಸ್‌ನ ಸಿದ್ಧಾಂತದ ಪರಿಣಾಮಗಳೇನು? ಹೀಗೆ ಪ್ರಶ್ನೆಗಳು ಮೆರವಣಿಗೆಯಾಗಿ ಬರುತ್ತವೆ. ವೈಜ್ಞಾನಿಕ ಕಾದಂಬರಿಗಳನ್ನು ಹಲವರು ರಚಿಸಿದ್ದಾರೆ. ಒಂದು ಕಾಲದಲ್ಲಿ ಕನ್ನಡದಲ್ಲಿ ರಾಜಶೇಖರ ಭೂಸನೂರ ಮಠ ಅವರು ತುಂಬ ಜನಪ್ರಿಯರು. ಕಾದಂಬರಿಯ ಬರವಣಿಗೆಯಲ್ಲಿ ಲೇಖಕರಿಗೆ ಆ ಸ್ವಾತಂತ್ರ್ಯವಿದೆ, ಅಲ್ಲಿ ಕಲ್ಪನಾ ವಿಲಾಸಕ್ಕೆ ಅಡ್ಡಿಯಿಲ್ಲ. ಅದರೆ ವೈಜ್ಞಾನಿಕ ಕೃತಿ ಹಾಗಲ್ಲ ಇಲ್ಲಿ ಸಂಶೋಧನೆಗಳ ವಿಚಾರಗಳನ್ನು ಆಸಕ್ತಿದಾಯಕವಾಗಿ ಹೇಳಬೇಕು, ಆದರ ರೋಚಕತೆಯಲ್ಲಿ ಸತ್ಯ ತೆಳುವಾಗಬಾರದು. ಇದು ಸವಾಲು. ಈ ಸವಾಲನ್ನು ಪ್ರದೀಪ್ ಕೆಂಜಿಗೆ ತುಂಬ ಚೆನ್ನಾಗಿ ನಿಭಾಯಿಸಿದ್ದಾರೆ ಎನ್ನುವುದಕ್ಕೆ. ನಾನು ಸಂಜೆ ಈ ಪುಸ್ತಕವನ್ನು ಓದಲು ಪ್ರಾರಂಭಿಸಿದವನು ರಾತ್ರಿಯ ವೇಳೆಗೆ ಓದಿ ಮುಗಿಸಿ ಮಲಗಿದೆ. ಕೆಲವು ಕಡೆಗಳಲ್ಲಿ ಬರವಣಿಗೆ, ದಿನಚರಿಗಳನ್ನು ಓದಿದ ಅನುಭವವಾಗುತ್ತದೆ. ಆದರೆ ಅದು ಅನಿವಾರ್ಯ. ಅವು ವೈಜ್ಞಾನಿಕ ದಾಖಲೆಗಳು.

ಇನ್ನೂ ಪುಸ್ತಕದ ಬಗ್ಗೆ ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ. ಅದನ್ನು ನೀವೆಲ್ಲ ಓದಿಯೇ ಅನುಭವಿಸಬೇಕು !

ಪುಸ್ತಕದ ಬಗ್ಗೆ ಇಷ್ಟು ಸಾಕು..

ಸುಮ್ಮನೆ ನನಗಿರುವ ಒಂದು ಕುತೂಹಲವನ್ನು ಇಲ್ಲಿ ಹೇಳಬೇಕು. ಈ ಪುಸ್ತಕ ಇಂಗ್ಲಿಷಿಗೆ ಭಾಷಾಂತರವಾದರೆ ಹೇಗಿರಬಹುದು? ಜೀವ ವಿಜ್ಞಾನಿ ಫ್ರಾನ್ಸ್ ಡಿ ವಾಲ್ ಈಗ ಇಲ್ಲ. ಜೇನ್ ಗುಡಾಲ್ ಈಗ ಇದ್ದಾರೋ ಇಲ್ಲವೋ ತಿಳಿಯದು. (90 ವರ್ಷದ ಜೇನ್ ಗುಡಾಲ್ ಇದ್ದಾರೆಂದು ಗೆಳೆಯರು ಈಗ ತಿಳಿದರು) ಅವರ ಜೊತೆ ಕೆಲಸ ಮಾಡಿದವರು ಇರಬಹುದು. ತಮ್ಮ ಸಂಶೋಧನೆಗಳು ಬೇರೊಂದು ಭಾಷೆಯಲ್ಲಿ ಸೃಜನಶೀಲ ಕೃತಿಯಾಗಿ ಹುಟ್ಟಿದ ಬಗ್ಗೆ ಅವರ ಪ್ರತಿಕ್ರಿಯೆ ಏನಿದ್ದೀತು. ಇವೆಲ್ಲ ಬರಿಯ ಊಹೆಗಳು ಮಾತ್ರ.

ಅದೇನೇ ಇರಲಿ. ಹೊಸ ತಲೆಮಾರಿನ ಭಾರತೀಯ, ಇಂಗ್ಲಿಷ್ ಓದುಗರಿಗೆ ಆಸಕ್ತಿದಾಯಕವಾಗಬಹುದು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248